	ವಿಲೇಜ್, ಬಸವಕಲ್ಯಾಣ	
25	ಮೆ: ಬೀರ್‌ದಾರ್ ಜಾಗರಿ ಇಂಡಸ್ಟ್ರಿ, ಕದಾಲಾಹಳ್ಳಿ, ಭಾಲ್ಕಿ ತಾಲ್ಲೂಕು.	217000
26	ಮೆ: ನೇತಾಜಿ ಆಇಲ್ ಇಂಡಸ್ಟ್ರೀಸ್, ಬೀದರ್.	36300
27	ಮೆ: ವೀರನಾಥ್ ಪಲ್ಸ್ಸ್, ನರಸಿಂಹಪುರ, ಔರಾದ್.	906250
28	ಮೆ: ಮಲ್ಲಿಕಾರ್ಜುನ್ ಖಿಂಡ್ರೆ ಸ್ಟೋನ್ ಕ್ರಷಿಂಗ್ ಇಂಡಸ್ಟ್ರಿ, ಕಲ್ಲೂರು ಹಳ್ಳಿ, ಹುಮನಾಬಾದ್	416500
29	ಮೆ: ನ್ಯೂ ವಿಶ್ವಕರ್ಮಾ ವುಡನ್ ಫರ್ನಿಚರ್, ಎಲ್‌ಐಸಿ ಆಫೀಸ್ ಹತ್ತಿರ, ಬಸವಕಲ್ಯಾಣ.	148320
	ಒಟ್ಟು	**6150825**

1. ಚುಕ್ಕೆ ಗುರುತಿಲ್ಲದ ಪ್ರಸಂ. : (374)135
2. ಸದಸ್ಯರ ಹೆಸರು : ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ
3. ಉತ್ತರಿಸುವ ಸಚಿವರು : (ಶ್ರೀ ಗೋವಿಂದ ಎಂ.ಕಾರಜೋಳ) ಮಾನ್ಯ ಸಣ್ಣ ನೀರಾವರಿ ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ ಭಾಲ್ಕಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು; ಇವು ಯಾವ ಯಾವ ಗ್ರಾಮಗಳ ವ್ಯಾಪ್ತಿಯಲ್ಲಿ ಇವೆ, ಈ ಕೆರೆಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಇದರಿಂದ ಎಷ್ಟು ಎಕರೆಗಳಿಗೆ ನೀರಾವರಿ ಸೌಲಭ್ಯ ದೊರಕಬಹುದೆಂದು ಅಂದಾಜಿಸಲಾಗಿತ್ತು ಹಾಗೂ ಈ ಕೆರೆಗಳಿಂದ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕಿಸಿಕೊಡಲಾಗಿದೆ (ಕೆರೆಗಳವಾರು ವಿವರಗಳನ್ನು ಒದಗಿಸುವುದು);

ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ **10** ಕೆರೆಗಳಿದ್ದು, ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಕೆರೆಗಳ ಪುನರುಜ್ಜೀವನಕ್ಕಾಗಿ ಮತ್ತು ಹೂಳೆತ್ತಲು ಪ್ರತಿ ವರ್ಷ ಖರ್ಚು ಮಾಡಲಾದ ಹಣವೆಷ್ಟು;

ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಗಳಿಗೆ ವೆಚ್ಚ ಮಾಡಿದ ಹಣ ಎಷ್ಟು;

VS-47

ಪ್ರಸಕ್ತ ಸಾಲಿನಲ್ಲಿ ಯೋಜನೇತರ ಲೆಕ್ಕ ಶೀರ್ಷಿಕೆಯಡಿ ವಾರ್ಷಿಕ ನಿರ್ವಹಣೆ ಮತ್ತು ವಿಶೇಷ ದುರಸ್ತಿಗಾಗಿ ಈ ಕೆಳಕಂಡ ಕೆರೆಗಳಿಗೆ ಒಟ್ಟು 1.25 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಕ್ರ.ಸಂ.	ಕೆರೆಯ ಹೆಸರು	ವೆಚ್ಚ (ಲಕ್ಷ ರೂ.ಗಳಲ್ಲಿ)
1	ಭಾಲ್ಕಿ ಸ.ನೀ.ಕೆರೆ	0.38
2	ಅಂಬೆಸಾಂಗವಿ ಸ.ನೀ.ಕೆರೆ.	0.38
3	ಹಾಲ ಹಿಪ್ಪರಗಾ ಸ.ನೀ.ಕೆರೆ.	0.26
4	ಹುಪಲಾ ಸ.ನೀ.ಕೆರೆ.	0.23
	ಒಟ್ಟು	1.25

ಈ ಈ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಇನ್ನೂ ಎಷ್ಟು ಹೊಸ ಕೆರೆಗಳ ನಿರ್ಮಾಣಕ್ಕಾಗಿ ಸರ್ವೆ ಮಾಡಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ; (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಈಗಾಲೇ ಅನುಮೋದನೆಗೊಂಡಿರುವ 7 ಹೊಸಕೆರೆಗಳ ನಿರ್ಮಾಣದ ಕಾಮಗಾರಿಗಳನ್ನು ಹೊರತುಪಡಿಸಿದಂತೆ ಇನ್ನೂ ಯಾವುದೇ ಹೊಸಕೆರೆಗಳ ನಿರ್ಮಾಣಕ್ಕಾಗಿ ಸರ್ವೆ ಕಾರ್ಯ ನಡೆಸಿಲ್ಲ.

ಉ ಹಾಗಿದ್ದಲ್ಲಿ, ಈ ಕೆರೆಗಳ ನಿರ್ಮಾಣಕ್ಕೆ ತಗಲುವ ವೆಚ್ಚವೆಷ್ಟು; ಈ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಪ್ರಸಕ್ತ ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಮೀಸಲಿಡಲಾಗಿದೆ?

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ ರವರ ಚುಕ್ಕೆ ಗುರುತಿಲ್ಲದ ಪ್ರ.ಸಂ.374ಕ್ಕೆ ಅನುಬಂಧ–1

ಕ್ರ ಸಂ.	ಸ.ನೀ. ಕೆರೆಯ ಹೆಸರು/ಗ್ರಾಮ	ನಿರ್ಮಿಸಿದ ವರ್ಷ	ವಿನ್ಯಾಸದಂತೆ ಅಚ್ಚುಕಟ್ಟು ಪ್ರದೇಶ (ಎಕರೆಗಳಲ್ಲಿ)	ಕೆರೆಯಿಂದ ನೀರಾವರಿಯಾಗುತ್ತಿರುವ ಅಚ್ಚುಕಟ್ಟು ಪ್ರದೇಶ (ಎಕರೆಗಳಲ್ಲಿ)	ಷರಾ.

1	ಭಾಲ್ಕಿ	1973	638	22	ಮಳೆಯ ಕಡಿಮೆ ಪ್ರಮಾಣದಿಂದ ಕೆರೆಯಲ್ಲಿ ನೀರು ಶೇಖರಣೆ ಪೂರ್ಣಮಟ್ಟಕ್ಕೆ ಆಗುವುದಿಲ್ಲ ಮತ್ತು ಇನ್ನಿತರ ತಾಂತ್ರಿಕ ಕಾರಣಗಳಿಂದ ನೀರಾವರಿ ಕಡಿಮೆಯಾಗುತ್ತಿದೆ.
2	ಅಂಬೆಸಾಂಗವಿ	1974	515	50	–ಅದೇ–
3	ಹಾಲ ಹಿಪ್ಪರ್ಗಾ	1971	900	303	–ಅದೇ–
4	ಹುಪಳಾ	1981	585	108	–ಅದೇ–
5	ಕೊಸಮ	1976	122	0	–ಅದೇ–
6	ಧನ್ನುರಾ	1971	335	48	–ಅದೇ–
7	ಜೈಗಾಂವ	1986	217	0	–ಅದೇ–
8	ಕಳಸದಾಳ–2ನೇ ಸೈಟ್	2003	100	0	ಅಂತರಜಲ ಮಟ್ಟ ಹೆಚ್ಚಿಸಿ ರೈತರ ಖಾಸಗಿ ಬಾವಿಗಳಿಂದ ಪರೋಕ್ಷ ನೀರಾವರಿ ಸೌಲಭ್ಯ ದೊರಕುತ್ತಿದೆ.
9	ಕೋನಮೇಲಕುಂದಾ ಇಂಗು ಕೆರೆ.	2008	100	0	–ಅದೇ–
10	ತೆಗಂಪೂರ – 2ನೇ ಸೈಟ್ ಇಂಗು ಕೆರೆ.	2008	100	0	–ಅದೇ–
	ಒಟ್ಟು		3612	531	

ಅನುಬಂಧ-2 (ವೆಚ್ಚ: ರೂ.ಲಕ್ಷಗಳಲ್ಲಿ)

ಕ್ರ ಸಂ.	ಸ.ನೀ.ಕೆರೆಯ ಹೆಸರು	ಯೋಜನೇತರ ಲೆಕ್ಕ ಶೀರ್ಷಿಯಡಿ ವಾರ್ಷಿಕ ನಿರ್ವಹಣೆ ಮತ್ತು ವಿಶೇಷ ದುರಸ್ತಿ ವೆಚ್ಚ.			ವೆಚ್ಚ ಜೂನ್ 08ರವರೆಗೆ.
		2005-06	2006-07	2007-08	
1	ಭಾಲ್ಕಿ	0.43	1.69	0.50	0.38
2	ಅಂಬೆಸಾಂಗವಿ.	0.75	0.87	1.26	0.38
3	ಹಾಲ ಹಿಪ್ಪರ್ಗಾ	2.26	3.00	2.15	0.26
4	ಹುಪಳಾ	2.21	0.45	2.87	0.23
5	ಕೊಸಮ	0	0.99	0.10	0
6	ಧನ್ನುರಾ	0.63	0.18	1.03	0
7	ಜೈಗಾಂವ	0.16	0.61	0	0
8	ಕಳಸದಾಳ-2ನೇ ಸೈಟ್	1.14	0.47	0.42	0
9	ಕೋನಮೇಲಕುಂದಾ ಇಂಗು ಕೆರೆ.	0	0	0	0
10	ತೇಗಂಪೂರ -2ನೇ ಸೈಟ್ ಇಂಗು ಕೆರೆ.	0	0	0	0
	ಒಟ್ಟು	7.58	8.26	8.33	1.25

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (366)136
ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರ ಪಲ್ಲಿ
ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು

ಅ) ಬೀದರ್ ಜಿಲ್ಲೆಯಲ್ಲಿ ಮಾಂಜ್ರಾ ನದಿಯ ನೀರನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವ ಸಲುವಾಗಿ ಎಷ್ಟು ಬ್ರಿಡ್ಜ್-ಕಂ-ಬ್ಯಾರೇಜ್ ಮತ್ತು ಏತ ನೀರಾವರಿ ಯೋಜನೆಯನ್ನು ನಿರ್ಮಿಸಲು ಸರ್ವೇ ಮಾಡಲಾಗಿದೆ;

ಕೃಷ್ಣಾ ಭಾಗ್ಯ ಜಲ ನಿಗಮದಡಿ ಬೀದರ್ ಜಿಲ್ಲೆಯ ಭಾಲ್ಕಿ ಮತ್ತು ಔರಾದ್ ತಾಲೂಕುಗಳಲ್ಲಿ ಮಾಂಜ್ರಾ ನದಿಗೆ ಅಡ್ಡಲಾಗಿ ಸರ್ಕಾರಿ ಆದೇಶ ಸಂ: ಜಸಂಇ 117 ಎಂಟಿಜೆಡ್ 2002 ದಿನಾಂಕ 8/8/2003 ರನ್ವಯ 4.80 ಟಿಎಂಸಿ ನೀರಿನ ಬಳಕೆಗಾಗಿ ಈ ಕೆಳಕಂಡ ನಾಲ್ಕು ಸರಣಿ ಬ್ಯಾರೇಜುಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು ಆದೇಶ ನೀಡಲಾಗಿರುತ್ತದೆ.